ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

ಡಿಎಸ್ಇಆರ್‌ಟಿ
DSERT

Phone - 080 26980100
Fax - 080 26422377

ಸಂಖ್ಯೆ: e-5433/DSERT/ Se.Lib/SCRP/03 /2022-23 ದಿನಾಂಕ:13.06.2022

# ದರಪಟ್ಟಿ ಆಹ್ವಾನಿಸಿ ಪ್ರಕಟಣೆ

ವಿಷಯ: ಸೆರಿಕ್ ಗ್ರಂಥಾಲಯದಲ್ಲಿನ ಅನುಪಯುಕ್ತ (Scrap)ಸಾಮಗ್ರಿಗಳನ್ನು ವಿಲೇವಾರಿ ಮಾಡಲಿದ್ದು ಖರೀದಿಸಲು ಇಚ್ಛೆ ಉಳ್ಳವರು ದರಪಟ್ಟಿ ಸಲ್ಲಿಸುವ ಬಗ್ಗೆ.

*****************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿರುವ ಸೂಚನೆಗಳನ್ವಯ ಸೆರಿಕ್ ಗ್ರಂಥಾಲಯದಲ್ಲಿನ ಅನುಪಯುಕ್ತ/ ಹಳೆಯ (Scrap) ವಸ್ತುಗಳನ್ನು ಯಥಾವತ್ತಾಗಿ ವಿಲೇವಾರಿಮಾಡಲಿದ್ದು ಖರೀದಿಸಲು ಇಚ್ಛೆ ಉಳ್ಳವರು ಕಛೇರಿ ವೇಳೆಯಲ್ಲಿ ಸೆರಿಕ್ ಗ್ರಂಥಾಲಯ, ಸುಭೇದಾರ್‌ಛತ್ರಂ ರಸ್ತೆ, ಬೆಂಗಳೂರು-560020. ಇಲ್ಲಿಗೆ ಬೇಟಿನೀಡಿ ವಸ್ತುಗಳನ್ನ ಪರಿಶೀಲಿಸಿ ದರಪಟ್ಟಿ ಸಲ್ಲಿಸಲು ಸೂಚಿಸಿದೆ.

ಆಸಕ್ತಿಯುಳ್ಳ ಸಂಸ್ಥೆಯವರು ಈ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾದ ಪ್ರಕಟಣೆಯನ್ನು ಪರಿಶೀಲಿಸಿ ದಿನಾಂಕ:23.06.2022 ರೊಳಗೆ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. #4. 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು. ಈ ವಿಳಾಸಕ್ಕೆ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸಲತಕ್ಕದ್ದು. ವಿಳಂಬವಾದ ದರಪಟ್ಟಿ ಸ್ವೀಕೃತಿಗೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ.

ಲಕೋಟೆಯ ಮೇಲೆ ಕಡ್ಡಾಯವಾಗಿ " ಅನುಪಯುಕ್ತ (Scrap) ವಸ್ತುಗಳ ವಿಲೇವಾರಿಗಾಗಿ ದರಪಟ್ಟಿ " ಎಂಬುದಾಗಿ ನಮೂದಿಸಿರತಕ್ಕದ್ದು.

| ಕ್ರ.ಸಂ | ಸಾಮಗ್ರಿವಿವರ | ಪ್ರತಿ kg ಗೆ | ದರ ( ರೂಗಳಲ್ಲಿ ) |
|---|---|---|---|
| 01 | ಕಬ್ಬಿಣದ ಸಾಮಗ್ರಿ | 1 kg ಗೆ | |
| 02 | ಪ್ಲಾಸ್ಟಿಕ್ ಸಾಮಗ್ರಿ | 1 kg ಗೆ | |
| 03 | ಮರ-ಮುಟ್ಟು | 1 kg ಗೆ | |

ನಿಬಂಧನೆಗಳು:-

1. ಕೊಟೇಶನ್‌ಗಳು ಕೆಟಿಟಿಪಿ ನಿಯಮಗಳಿಗೆ ಒಳಪಟ್ಟಂತೆ ಇರತಕ್ಕದ್ದು.
2. ದರಪಟ್ಟಿ ಪ್ರಕಟಣೆಯಲ್ಲಿ ಪಾಲ್ಗೊಳ್ಳುವ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
3. ದರಗಳನ್ನು ನಮೂದಿಸುವಾಗ ಪ್ರತೀ ಸಾಮಗ್ರಿಗೆ ಪ್ರತ್ಯೇಕ ತಲಾ 1 kg ಗೆ ತಗುಲುವ ದರವನ್ನು ವಿವರವಾಗಿ ನಮೂದಿಸತಕ್ಕದ್ದು.
4. ದರಗಳು ಎಲ್ಲಾ ಶಾಸನಬದ್ಧ ತೆರಿಗೆಗಳನ್ನು ಒಳಗೊಂಡಂತೆ ಇರತಕ್ಕದ್ದು.

5. ಅತ್ಯಂತ ಹೆಚ್ಚು ( H1 ) ದರ ನಮೂದಿಸಿ, ಯಶಸ್ವಿ ಸಂಸ್ಥೆ ಕಾರ್ಯಾದೇಶ ಪಡೆದ ನಂತರ ಸಾಮಗ್ರಿಯನ್ನು ಕಛೇರಿಯಿಂದ ಕೊಂಡೊಯ್ಯುವ ಮುಂಚಿತವಾಗಿ, ನಮೂದಿತ ದರವನ್ನು ಪಾವತಿಸಲು ಬದ್ದರಾಗಿರಬೇಕು. ತಪ್ಪಿದಲ್ಲಿ ಕಾರ್ಯಾದೇಶವನ್ನು ರದ್ದುಪಡಿಸಲಾಗುವುದು.
6. ತೂಕದ ಯಂತ್ರ ಹಾಗೂ ಸಾಗಾಟದ ವಾಹನವನ್ನು ತಾವೇ ಒದಗಿಸಿಕೊಳ್ಳುವುದು.
7. ದರಪಟ್ಟಿ ಪರಿಶೀಲಿಸಿದ ನಂತರದಲ್ಲಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ನಿರ್ದೇಶಕರದ್ದಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಗ್ರಂಥಾಲಯಾಧಿಕಾರಿಗಳನ್ನು ದೂರವಾಣಿ ಸಂಖ್ಯೆ: 8088433888 ರಲ್ಲಿ ಸಂಪರ್ಕಿಸಬಹುದು.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು-85
13/06/2022